Least the government can do is ಅವರು ವಿದೇಶಕ್ಕೆ ಹೋಗಿ ಟ್ರೈನಿಂಗೋ, ತರಬೇತಿನೋ, ಜ್ಞಾನವನ್ನೋ ಪಡೆದುಕೊಂಡು ಬಂದಮೇಲೆ ಒಂದು ವರ್ಷವಾದರೂ ಅವರು ಅದೇ ಜಾಗದಲ್ಲಿ ಮುಂದುವರಿಯುವ ಹಾಗೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ನಾನು ನೋಡುತ್ತಾ ಬಂದಿದ್ದೇನೆ, ಅವರು ವಿದೇಶದಿಂದ ಬಂದ ಮೂರು ತಿಂಗಳಲ್ಲಿಯೇ ಆ ಜಾಗದಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ವಿದೇಶದಿಂದ ಏನು ಜ್ಞಾನವನ್ನು ಪಡೆದುಕೊಂಡು ಬರುತ್ತಾರೋ ಅದನ್ನು ಆ ಇಲಾಖೆಗೆ ಅಥವಾ ಆ ಸಂಸ್ಥೆಗೆ ಉಪಯೋಗಿಸುವುದಕ್ಕೆ ಅಥವಾ ಅಳವಡಿಸುವುದಕ್ಕೆ, ಅನುಷ್ಠಾನಕ್ಕೆ ತರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರ ಈ ನಿರ್ಧಾರ ತೆಗೆದುಕೊಳ್ಳಬಹುದೇ? ಯಾರು ಸ್ಪೆಸಿಫಿಕ್ ಪರ್ಪಸ್‌ಗೆ ವಿದೇಶ ಪ್ರವಾಸಕ್ಕೆ ಹೋಗುತ್ತಾರೋ ಅವರು ತರಭೇತಿ ಪಡೆದುಕೊಂಡು ಬಂದಮೇಲೆ ಅವರನ್ನೇ ಆಯಾ ಇಲಾಖೆಯಲ್ಲಿ ಕನಿಷ್ಠ ಪಕ್ಷ ಒಂದು ವರ್ಷವಾದರೂ ಮುಂದುವರಿಸುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬಹುದು.

ಅಧ್ಯಕ್ಷರು:– ಆಯಿತು. ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ– ಮಾನ್ಯ ಅಧ್ಯಕ್ಷರೆ, ಕೊನೆ ಪ್ರಶ್ನೆಗೆ ಉತ್ತರ ಸರ್ವೇಸಾಮಾನ್ಯವಾಗಿ ಯಾವುದಾದರೂ ಒಂದು ಸೀಮಿತವಾದಂಥ ಉದ್ದೇಶದಿಂದ ಒಬ್ಬ ಅಧಿಕಾರಿಯನ್ನು ನಾವು ಹೊರದೇಶಗಳಿಗೆ ಕಳುಹಿಸಿದಾಗ Commonsense dictate ಏನು ಮಾಡುತ್ತದೆ ಎಂದು ಹೇಳಿದರೆ ಅವರನ್ನು ಅಲ್ಲಿಯೇ ಮುಂದುವರಿಸಿ ಅವರ ಲಾಭ ಆ ಸಂಸ್ಥೆಗೆ ಮತ್ತು ಆ ಮೂಲಕ ರಾಜ್ಯಕ್ಕೆ ಸಿಗತಕ್ಕಂಥ ವಾತಾವರಣ ಸೃಷ್ಟಿ ಮಾಡಬೇಕು ಎಂದು ತಾವೇನು ಉದ್ದೇಶ ಪಟ್ಟಿದ್ದೀರಿ ಅದಕ್ಕೆ ನಾನು ಪೂರಕವಾಗಿದ್ದೇನೆ. ಅದರಲ್ಲಿ ನಾನು ಸಮಭಾಗಿಯಾಗಿದ್ದೇನೆ. ಮಾನ್ಯ ಸದಸ್ಯರು ಕೇಳಿದರು, ಹೆಚ್ಚು ಹಣ ಅಧಿಕಾರಿ ಡ್ರಾ ಮಾಡಿದ್ದರೆ ಅದನ್ನು ವಾಪಸ್ಸು ಪಡೆದಿದ್ದೀರಾ ಆ ರೀತಿ ಎಷ್ಟು ಇದೆ ಎಂದು ಕೇಳಿದರು. ಸರ್ವೇ ಸಾಧಾರಣವಾಗಿ ಒಂದು ಬಜೆಟ್ ಫಿಕ್ಸ್ ಮಾಡಿರುತ್ತಾರೆ. ಆ ಬಜೆಟ್‌ನ್ನು ಮೀರಿದರೆ ಹಾಗೂ ಅದಕ್ಕೆ ಸಕಾರಣಗಳು ಇಲ್ಲದೇ ಹೋದರೆ ನಾವು ಕೆಲವು ಕ್ರಮವನ್ನು ಕೈ ಗೊಳ್ಳುತ್ತೇವೆ. ಉದಾಹರಣೆಗೆ ಅವರು ವಾಪಸ್ಸು ಬರಬೇಕಾದರೆ ಯಾವುದೋ ಒಂದು ವಿಶ್ವದ ಬೆಳವಣಿಗೆಗಳ ಕಾರಣ ಆ ವಿಮಾನ ಬರಲಿಲ್ಲ, ಅಂಥ ಅಚಾತುರ್ಯಗಳು ನಡೆದಾಗ ಸ್ವಲ್ಪ ಜಾಸ್ತಿ ಎಕ್ಸ್‌ಪೆಂಡಿಚರ್ ಆದರೆ ಅದಕ್ಕೆ ಸಮಜಾಯಿಷಿ ಅವರು ಕೊಟ್ಟಿದ್ದರೆ ಅದನ್ನು ಅಬ್ಸಾರ್ಬ್ ಮಾಡುತ್ತೇವೆ, ಇಲ್ಲದೇ ಇದ್ದರೆ ಆ ಅಧಿಕಾರಿಯಿಂದ ವಸೂಲು ಮಾಡತಕ್ಕಂಥದ್ದು ಸರ್ಕಾರದ ಸಾಧಾರಣವಾದಂಥ ಒಂದು ನಿಯಮ. ವಿದೇಶ ಪ್ರವಾಸ ಏತಕ್ಕಾಗಿ ಹೋಗುತ್ತಾರೆ ಎನ್ನತಕ್ಕಂಥದ್ದರ ಬಗ್ಗೆ ನಾನು ಮೊದಲನೆಯ ಪ್ರಶ್ನೆಯಲ್ಲಿಯೇ ಅದಕ್ಕೆ ಉತ್ತರವನ್ನು ಹೇಳಿದ್ದೇನೆ. ಎಷ್ಟು ಸಫಲವಾಗಿದೆ ಎಂಬುದರ ಬಗ್ಗೆ ಕಾಲವೇ ಅದಕ್ಕೆ ಒಂದು ನಿರ್ಣಯವನ್ನು ಬೇಕಾದಷ್ಟು ಆದರೂ ಇತರ ಪ್ರಶ್ನೆಗಳಿಗೆ ಹೇಗೆ ಕಾಲ ನಿರ್ಣಾಯಕವಾಗುತ್ತದೆಯೋ ಹಾಗೆಯೇ ಒಬ್ಬ ಅಧಿಕಾರಿಯ contribution to the state ಬಗ್ಗೆಯೂ ಕೂಡ ಕಾಲ ನಿರ್ಣಯಿಸಬೇಕಾಗುತ್ತದೆಯೇ ಹೊರತು ಅದನ್ನು ನಾವು ಸ್ಪೆಸಿಫಿಕ್ ಆಗಿ ಅವರು ಬಂದ ತಕ್ಷಣ ಇಷ್ಟೇ ಆಯಿತು ಎಂದು ಹೇಳುವುದಕ್ಕೆ ಬರುವುದಿಲ್ಲ.

ಹುಣಸೂರು ತಾಲ್ಲೂಕಿನ ಸಣ್ಣ ನೀರಾವರಿ ಅನುದಾನ ನಿಗದಿಯಲ್ಲಿ ಬದಲಾವಣೆ

176 (1972) ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಅಚ್ಚುಕಟ್ಟು ಸುಮಾರು 3500 ಎಕರೆಗಳಿದ್ದು ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಸರ್ಕಾರ ಅನುದಾನ ನೀಡುವಾಗ ಕ್ಷೇತ್ರವಾರು ಹಂಚಿಕೆ ಮಾಡುತ್ತಿರುವುದರಿಂದ ಅನ್ಯಾಯವಾಗುತ್ತಿಲ್ಲವೇ;

ಇ) ಒಂದೇ ರೀತಿಯ ಅನುದಾನ ಕೊಡುತ್ತಿರುವುದನ್ನು ಬದಲಾವಣೆ ಮಾಡಿ ಎಕರೆವಾರು ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಈ) ಈಗಲಾದರೂ ಈ ತಾರತಮ್ಯ ಸರಿಪಡಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಹುಣಸೂರು ತಾಲ್ಲೂಕಿನ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಅಣೆಕಟ್ಟು, ಪಿಕಪ್ ಮತ್ತು ಏತ ನೀರಾವರಿ ಸೇರಿ ಒಟ್ಟು 12484 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಆ) ಅನುದಾನವನ್ನು ಆಯಾ ತಾಲ್ಲೂಕಿನ ಅಚ್ಚುಕಟ್ಟಿಗೆ ಅನುಗುಣವಾಗಿ ಹಂಚಲಾಗುತ್ತದೆ.

ಇ) ಈ) ಉದ್ಭವಿಸುವುದಿಲ್ಲ.

ಶ್ರೀ ವಿ. ಪಾಪಣ್ಣ :- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯಲ್ಲಿ ಹುಣಸೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಅಚ್ಚುಕಟ್ಟು 35 ಸಾವಿರ ಎಕರೆಗಳಿದ್ದು ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿರುವುದು ನಿಜವಲ್ಲವೇ ಎಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರದಲ್ಲಿ 12484 ಹೆಕ್ಟೇರ್, ಅಂದರೆ 31210 ಎಕರೆ ಅಚ್ಚುಕಟ್ಟು ಇದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಹುಣಸೂರು ತಾಲ್ಲೂಕು ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿ ಇದೆಯೇ ಎನ್ನುವ ಪ್ರಶ್ನೆಗೆ ಅವರು ನೇರವಾಗಿ ಉತ್ತರ ಕೊಟ್ಟಿಲ್ಲ. ಇನ್ನು, ಎರಡನೆಯ ಪ್ರಶ್ನೆಯಲ್ಲಿ ಸರ್ಕಾರ ಅನುದಾನ ನೀಡುವಾಗ ಅಚ್ಚುಕಟ್ಟಿನ ಆಧಾರದ ಮೇಲೆ ಅನುದಾನವನ್ನು ಹಂಚದೇ ತಾರತಮ್ಯ ಮಾಡುತ್ತಿದ್ದಾರೆ ಎನ್ನುವಂಥದ್ದನ್ನೂ ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಅನುದಾನವನ್ನು ಆಯಾ ತಾಲ್ಲೂಕಿನ ಅಚ್ಚುಕಟ್ಟಿಗೆ ಅನುಗುಣವಾಗಿ ಹಂಚಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ಈ ರೀತಿಯಲ್ಲಿ ತಪ್ಪು ಮಾಹಿತಿಯನ್ನು ಇಲಾಖೆಯವರು ಮಾನ್ಯ ಸಚಿವರ ಮೂಲಕ ಕೂಡಿಸಿದ್ದಾರೆ ಎಂದು ನಾನು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ. ಈಗ ಮೊನ್ನೆ ಮೊನ್ನೆ ಒಂದೊಂದು ತಾಲ್ಲೂಕಿಗೆ ಹತ್ತತ್ತು ಲಕ್ಷ ರೂಪಾಯಿಗಳನ್ನು ಸಣ್ಣ ನೀರಾವರಿಗೆ ಕೊಟ್ಟರು. 35 ಸಾವಿರ ಎಕರೆ ಅಚ್ಚುಕಟ್ಟು ಇದ್ದರೂ ಕೂಡ ಹತ್ತು ಲಕ್ಷ ರೂಪಾಯಿ, ಒಂದು ಸಾವಿರ ಎಕರೆ ಅಚ್ಚುಕಟ್ಟು ಇದ್ದರೂ ಕೂಡ ಅದಕ್ಕೂ ಹತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಸಣ್ಣ ನೀರಾವರಿ ಇಲ್ಲದೇ ಇರುವ ಜಾಗಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರು. ಇದು ತಾರತಮ್ಯವಲ್ಲವೇ ಎನ್ನುವ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕಳುಹಿಸಿದ್ದಾರೆ ಆ ಪ್ರಶ್ನೆಯಲ್ಲಿ ಹುಣಸೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿಯ ಅಚ್ಚುಕಟ್ಟು ಸುಮಾರು 3500 ಎಕರೆಗಳಿದ್ದು ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿರುವುದು ನಿಜವಲ್ಲವೇ ಎಂದಿದ್ದಾರೆ. ಹೀಗಾಗಿ 3500 ಎಕರೆ ಎಂದು ನೀವೇ ಪ್ರಿಂಟ್ ಮಾಡಿಸಿ ಸೈನ್ ಮಾಡಿ ಕಳುಹಿಸಿದ್ದೀರಿ. ಆದರೆ ಅಲ್ಲಿ ಇರುವುದು 35 ಸಾವಿರ ಹೌದಾ? ಇನ್ನು ನಾವೇನು ಮಾಡುವುದಕ್ಕಾಗುತ್ತದೆ? ಅದರ ಆಧಾರದ ಮೇಲೆಯೇ ನಾವು ಹೇಳಿದ್ದು. ಆದ್ದರಿಂದ ಇದರಲ್ಲಿ ತಾರತಮ್ಯ ಮಾಡುವ ಪ್ರಶ್ನೆಯೇ

ಉದ್ಭವಿಸುವುದಿಲ್ಲ. ಅವಶ್ಯಕತೆ ಅನುಸಾರ ಮತ್ತು ಹಣದ ಲಭ್ಯತೆ ನೋಡಿಕೊಂಡು ನಾವು ಮೇನ್‌ಟೇನ್ಸ್ ಗ್ರ್ಯಾಂಟ್‌ನ್ನು ಬಿಡುಗಡೆ ಮಾಡುತ್ತೇವೆ. ಈಗ ಹುಣಸೂರಿಗೆ ಸುಮಾರು 20,43,000 ಹಣವನ್ನು 2702 ಹೆಡ್‌ನಲ್ಲಿ ಬಿಡುಗಡೆಯನ್ನು ಮಾಡಿದ್ದೇವೆ.

12.30 ಪಿ.ಎಂ.

ಬೇರೆ ತಾಲ್ಲೂಕುಗಳಿಗೆ ಹೋಲಿಸಿದಾಗ ಆ ಮೈಸೂರು, ಹೆಚ್.ಡಿ.ಕೋಟೆ, ನಂಜನಗೂಡು, ಟಿ.ಆರ್. ನರಸಿಪುರ, ಪಿರಿಯಾಪಟ್ಟಣ, ಕೆ.ಆರ್. ನಗರ, ಈ ಏಳು ತಾಲ್ಲೂಕುಗಳಿಗೆ ಹೋಲಿಸಿದರೆ ಹೆಚ್ಚಿನ ಹಣವನ್ನು ಹುಣಸೂರು ತಾಲ್ಲೂಕಿಗೆ ಕೊಟ್ಟಿದ್ದೇವೆ, ಇನ್ನು ನೀವು ಹಣ ಬೇಕೆಂದು ಕೇಳಿದ್ದೀರಿ, ಆದರೆ ಹಣದ ಕೊರತೆ ಇರುವುದರಿಂದ ಅಷ್ಟೊಂದು ಹಣವನ್ನು ಏಕಕಾಲದಲ್ಲಿ ಬಿಡುಗಡೆ ಮಾಡುವುದಕ್ಕಾಗುವುದಿಲ್ಲ, ಎರಡನೆಯದಾಗಿ ಈ ಹಿಂದೆಯೂ ಕೂಡ ಕಾಲುವೆಯ ಕೆಲಸ, ಮತ್ತೆ ಹೂಳನ್ನು ಎತ್ತುವಂತಹ ಕೆಲಸ, ನಾವು ಬಜೆಟ್ ಪ್ರಾವಿಜನ್ ಎಷ್ಟು ಮಾಡಿದ್ದೇವೆ, ಅದಕ್ಕಿಂತಲೂ ಹೆಚ್ಚಿಗೆ ನಾವು ಕೆಲಸವನ್ನು ಮಾಡಿಸಿದ್ದೇವೆ. ಅದಕ್ಕಾಗಿ ನಾವು ಹಣವಿದ್ದಷ್ಟೆ ಮಾಡಿದಿದ್ದರೆ ಈ ಪ್ರಶ್ನೆ ಇರುತ್ತಿರಲಿಲ್ಲ, ಆದರೆ ನಾವು ಬಜೆಟ್ ಪ್ರಾವಿಜನ್‌ಗಿಂತ ಹೆಚ್ಚಿನ ಕೆಲಸವನ್ನು ತೆಗೆದುಕೊಂಡಿರುವುದರಿಂದ, ಆ ಬಾಕಿ ಉಳಿದಿರುವುದಕ್ಕಾಗಿ ಈ ಪ್ರಶ್ನೆ ಉದ್ಭವವಾಗಿದೆ, ಅದಕ್ಕಾಗಿ ನಾವು ಹಣ ಬಂದಾಗ ಇದರ ಬಗ್ಗೆ ನಾವು ಪರಿಶೀಲನೆ ಮಾಡಿ, ಸಹಾಯ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ವಿ. ಪಾಪಣ್ಣ :- ಮಾನ್ಯ ಅಧ್ಯಕ್ಷರೇ, ತಾವು ಬಿಡುಗಡೆ ಮಾಡಿರುವ ಹಣಕ್ಕಿಂತಲೂ ಅದರ ಹತ್ತರಷ್ಟು ಕೆಲಸ ಮಾಡಿರುವಂಥಾದ್ದು ಸತ್ಯ. ಅದು ಈ ಸರ್ಕಾರ ಬಂದು ಅಲ್ಲ, ಹಿಂದಿನ ಸರ್ಕಾರದವರು ಅದನ್ನು ಮಾಡಿದ್ದು, ಇದನ್ನು ತನಿಖೆಗೆ ಒಳಪಡಿಸಬೇಕೆಂದು ಹೇಳಿದಂಥವನು ತಾನೇ, ಕೆಲಸ ಮಾಡದೇ ಬಿಲ್ ಮಾಡಿರುವಂಥಾದ್ದನ್ನು ತಡೆ ಹಿಡಿಯಬೇಕು, ಕೊಡಬಾರದು, ಮತ್ತೆ ಕಳಪೆ ಕಾಮಗಾರಿಯನ್ನು ಮಾಡಿದ್ದಾರೆಂದು, ಹಾಳು ಮಾಡಿದ್ದಾರೆಂಬ ದೂರನ್ನು ಕೊಟ್ಟು ಅದನ್ನು ತನಿಖೆ ಮಾಡಬೇಕೆಂದು ಇದೆ, ಈಗ ಈ ಸರ್ಕಾರ ಬಂದನಂತರ ಹಣ ಹೆಚ್ಚಿಗೆ ಬಿಡುಗಡೆ ಮಾಡಿ ಕೊಟ್ಟಿಲ್ಲ. ಹಿಂದೆ ಏನು ಕಾಮಗಾರಿಯನ್ನು ಮಾಡಿದ್ದಾರೋ, ಆ ಲೋಪವನ್ನೇ ಇಟ್ಟುಕೊಂಡು, ಈಗ ಇರುವಂತಹ ಕಾಮಗಾರಿಗಳೆಲ್ಲಾ ಸ್ಥಗಿತವಾಗುತ್ತಿದೆ. ದಯವಿಟ್ಟು ನಾನು ಮನವಿ ಮಾಡುವುದೆನೆಂದರೆ, ಅದೇ ವಿಷಯವನ್ನು ತೆಗೆದುಕೊಂಡು ಈ ನಮ್ಮ ಕಾಮಗಾರಿಗಳೆಲ್ಲಾ, ಸ್ಥಗಿತಗೊಂಡಿದೆ, ತಾವು ದಯಮಾಡಿ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ ಪ್ರಕಾರ ಹಣ ಬಂದಹಾಗೆ ನಾವು ಸಹಾಯ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ, ಈ ಹಿಂದೆ ಏನು ನಡೆಯಿತೆಂಬುದು ತಮಗೆ ಗೊತ್ತಿದೆ, ಅನೇಕ ಸಾರಿ, ಕೆಲವು ಅಧಿಕಾರಿಗಳೂ ಕೂಡ 10 ಲಕ್ಷ ರೂಪಾಯಿಗಳ ಪ್ರಾವಿಜನ್ ಇದ್ದರೆ, ಇವರು 20,25 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿಸುವಂಥಾದ್ದು, ಇಲ್ಲವೆಂದರೆ ಸ್ಥಳೀಯ ಪ್ರೆಶರ್‌ನಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡುವಂಥಾದ್ದು. ಅನಂತರ ನೀವು ಎಲ್‌ಓಸಿ ಕೊಟ್ಟಿಲ್ಲವೆಂದು, ಹಣವನ್ನು ಕೊಟ್ಟಿಲ್ಲವೆಂದು, ನಮ್ಮ ಬಿಲ್‌ನ ಹಣ ಪಾವತಿಯಾಗಿಲ್ಲವೆಂದು ಇನ್ನೊಂದು ಕಡೆ ಹೇಳುವಂಥಾದ್ದು. ಈ ಎರಡು ಸಂಗತಿಗಳು ಇವೆ, ತಾವು ಹಿಂದೆ ಕೂಡ ಪ್ರೊಟೇಸ್ಟ್ ಮಾಡಿದ್ದೀರಿ, ಕೆಲಸ ಸರಿಯಾಗಿ ನಡೆದಿಲ್ಲ,

ನಿಲ್ಲಿಸಬೇಕೆಂದು ಈ ಹಿಂದೆ ಕೂಡ ಹೇಳಿದ್ದೀರಿ. ಪುನಃ ಈಗ ನಾವು ಹಣವಿಲ್ಲದೇ ಕೆಲಸವನ್ನು ಪ್ರಾರಂಭ ಮಾಡಿದರೆ, ಮತ್ತೆ ಗುತ್ತಿಗೆದಾರರು ಆಫೀಸ್‌ಗಳ ಮುಂದೆ ಧರಣಾ ಮಾಡುವಂಥಾದ್ದು, ಪ್ರೊಟೆಸ್ಟ್ ಮಾಡುವಂಥಾದ್ದು ಮಾಡುತ್ತಾರೆ. ಆದುದರಿಂದ ಈ ವರ್ಷದ ಬಜೆಟ್‌ನಲ್ಲಿ ನಮಗೆ ಹಣ ಬಂದಾಗ ಅದನ್ನು ನೋಡಿಕೊಂಡು ಅಲ್ಲಿಗೆ ಸಹಾಯ ಮಾಡುವಂತಹ ಕೆಲಸವನ್ನು ಮಾಡುತ್ತೇವೆ, ಏಕೆಂದರೆ ಇದು ಅತ್ಯಂತ ದೊಡ್ಡದಾದ ಕಾಲುವೆ, ಮತ್ತೆ ಸುಮಾರು 120 ಕಿ.ಮೀ ಉದ್ದದ ಇರುವಂತಹ, ಮೈನರ್ ಇರಿಗೇಷನ್‌ನಲ್ಲಿ ದೊಡ್ಡ ಕಾಲುವೆಯಾದ ಕಾರಣ, ಇದಕ್ಕೆ ಎಷ್ಟರಮಟ್ಟಿಗೆ ಹಣವನ್ನು ಒದಗಿಸಬೇಕೆಂಬ ಬಗ್ಗೆ ಹಣದ ಲಭ್ಯತೆ ಮೇಲೆ, ಹಣವನ್ನು ಇದಕ್ಕೆ ಒದಗಿಸುತ್ತೇನೆ.

ಅಧ್ಯಕ್ಷರು :- ಈಗ ಪ್ರಶ್ನೋತ್ತರದ ವೇಳೆ ಮುಕ್ತಾಯವಾಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯನ್ನು ಮಾನ್ಯ ಡಿ.ಬಿ. ಚಂದ್ರೇಗೌಡರು ಮಂಡಿಸಬೇಕು.

1) (ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ):- ಮಾನ್ಯ ಅಧ್ಯಕ್ಷರೇ ದಿನಾಂಕ 18-3-2003ರಂದು ಲಿಖಿತ ಮೂಲಕ ಉತ್ತರಿಸುವ 145 ಪ್ರಶ್ನೆಗಳ ಪೈಕಿ 104 ಪ್ರಶ್ನೆಗಳಿಗೆ ಮುಂದೆ ಮಂಡಿಸುತ್ತೇನೆ. ಅನುಬಂಧ - 1

ಅಧ್ಯಕ್ಷರು:- ಮಂಡಿಸಲಾಯಿತು.

2. ಪ್ರಕಟಣೆ

ವಿಷಯ:- ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ನಾಮಕರಣ ಮಾಡುವ ಬಗ್ಗೆ

ಅಧ್ಯಕ್ಷರು:- ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಸಭಾ ಸದಸ್ಯರಾದ ಶ್ರೀ ರಾಜುಗೌಡರು ಸಚಿವರಾದ ಪ್ರಯುಕ್ತ ತೆರವಾದ ಆ ಸ್ಥಾನಕ್ಕೆ ವಿಧಾನ ಸಭಾ ಸದಸ್ಯರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆಂದು ಈ ಮೂಲಕ ತಿಳಿಸಲಾಗಿದೆ.

ಈಗ ಗಮನ ಸೆಳೆಯುವ ಸೂಚನೆಯನ್ನು ಮುಗಿಸೋಣ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) :- ಮಾನ್ಯ ಅಧ್ಯಕ್ಷರೇ, ಈಗ ಶೂನ್ಯ ವೇಳೆಯ ಬಗ್ಗೆ.

ಅಧ್ಯಕ್ಷರು:- ತಾವು ಏನು ವಿಷಯಗಳನ್ನು ಕಳುಹಿಸಿದ್ದೀರೋ, ಅದನ್ನು ಸಭೆಯಲ್ಲಿ ಪ್ರಸ್ತಾಪ ಮಾಡುವುದಿದ್ದರೆ, Don't expect any answers. ಅವರು ಉತ್ತರ ರೆಡಿ ಮಾಡಿರುವುದನ್ನು ಕಳುಹಿಸಿಲ್ಲ, ನಮಗೆ ಸರ್ಕಾರದವರು ಕಳುಹಿಸಬೇಕಲ್ಲಾ?

ಶ್ರೀ ಸಿ. ಬೈರೇಗೌಡ:- ಅವರು ಕಳುಹಿಸುವುದೇ ಇಲ್ಲ. ನಾನು ತಮ್ಮನ್ನು, 11ನೇ ತಾರೀಖಿನಂದು ಭೇಟಿಯಾಗಿದ್ದೇನೆ,

ಅಧ್ಯಕ್ಷರು:- ನೀವು ಶೂನ್ಯ ವೇಳೆಯಲ್ಲಿ ಉತ್ತರ ಬೇಕಾಗಿಲ್ಲದಿದ್ದರೆ, ಸಭೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿ. I have no objection.

ಶ್ರೀ ಸಿ. ಬೈರೇಗೌಡ:- ನಾವು ಪ್ರಸ್ತಾಪ ಮಾಡುತ್ತೇವೆ, ಅದಕ್ಕೆ ಸರ್ಕಾರದಿಂದಲೂ ಪ್ರತಿಕ್ರಿಯೆ ಬರಬೇಕಾಗುತ್ತದೆ.